# ಸದ್ಗುಣದ ಫಲ

ಡಿ. ಪಾಂಡುರಂಗ ಭಟ್

ಏಕತ, ದ್ವಿತ, ತ್ರಿತ ಎಂಬುವವರು ಗೌತಮ ಋಷಿಯ ಮೂವರು ಮಕ್ಕಳು. ಇವರಲ್ಲಿ ತ್ರಿತ ಬುದ್ಧಿವಂತ ಹಾಗೂ ದಯಾಳು. ಅವನ ಈ ಗುಣಗಳಿಂದ ಎಲ್ಲರ ಮೆಚ್ಚುಗೆ ಪಡೆದುಕೊಂಡಿದ್ದ. ವಯಸ್ಕರಾದಾಗ ಮೂವರು ಸಹೋದರರು ಕಲಿಕೆಯ ಭಾಗವಾಗಿ ತೀರ್ಥಯಾತ್ರೆ ಮಾಡುತ್ತಿದ್ದರು. ತಂದೆಯಾದ ಗೌತಮ ಋಷಿ ಅನೇಕ ಶಿಷ್ಯರನ್ನು ಹೊಂದಿದ್ದು ಎಲ್ಲೆಡೆ ತುಂಬಾ ಪ್ರಸಿದ್ಧಿ ಪಡೆದವರಾದ್ದರಿಂದ, ಏಕತ, ದ್ವಿತ, ಹಾಗೂ ತ್ರಿತರಿಗೆ ಹೋದ ಕಡೆಯಲ್ಲೆಲ್ಲಾ ಉಡುಗೊರೆ, ಹಸು, ನಾಣ್ಯಗಳನ್ನು ಕೊಡುತ್ತಿದ್ದರು. ತ್ರಿತನ ಬುದ್ಧಿವಂತಿಕೆ ಹಾಗೂ ಔದಾರ್ಯ ಗುಣಗಳಿಂದ ಅವನಿಗೆ ಹೆಚ್ಚು ಉಡುಗೊರೆ ದೊರೆತಿದ್ದು, ಏಕತ, ದ್ವಿತ ಸಹೋದರರಿಗೆ ಅಸೂಯೆ ತಂದಿತ್ತು. ಹೇಗಾದರೂ ಮಾಡಿ ತ್ರಿತನಿಂದ ಅವನ ಸಂಪತ್ತನ್ನು ದೋಚುವ ಸಮಯಕ್ಕಾಗಿ ಕಾಯುತ್ತಿದ್ದರು.

ಕಾಡಿನಲ್ಲಿ ನಡೆಯುವಾಗ ತೋಳವೊಂದನ್ನು ಕಂಡ ಏಕತ, ದ್ವಿತರು ತಮ್ಮನಾದ ತ್ರಿತನಿಗೆ ತೋಳ ಬಂದಿದೆ ಎಂದು ತಿಳಿಸದೇ, ತಾವಿಬ್ಬರೇ ಮರ ಏರಿ ತೋಳದಿಂದ ತಪ್ಪಿಸಿ ಕೊಂಡರು. ತ್ರಿತನಿಗೆ ತೋಳವು ಹತ್ತಿರ ಬರುವತನಕ ತಿಳಿಯದೆ, ಹತ್ತಿರ ಬಂದಾಗ ಅದರಿಂದ ತಪ್ಪಿಸಿಕೊಳ್ಳಲು ಓಡುತ್ತಾ ಓಡುತ್ತಾ ತಿಳಿಯದೇ ನೀರಿಲ್ಲದ ಒಂದು ಹಾಳು ಬಾವಿಯಲ್ಲಿ ಬಿದ್ದುಬಿಟ್ಟ.

ಅವನು ತನ್ನ ಸಹಾಯಕ್ಕಾಗಿ ಸಹೋದರರನ್ನು ಕರೆದರೂ ಯಾವುದೇ ಪ್ರಯೋಜನವಿಲ್ಲದಾಯಿತು. ಏಕತ, ದ್ವಿತರು, ತ್ರಿತನ ಎಲ್ಲಾ ಉಡುಗೊರೆ, ನಾಣ್ಯಗಳನ್ನು, ತೆಗೆದುಕೊಂಡು, ಅವನು ತಮ್ಮನ್ನು ಕರೆಯುತ್ತಿದ್ದರೂ ಸಹಾಯ ಮಾಡದೆ ಅವನ ಸೊತ್ತನ್ನೂ ತೆಗೆದುಕೊಂಡು ಮನೆ ತಲುಪಿದರು.

ಅಸಹಾಯಕ ತ್ರಿತನು ಬಾವಿಯಲ್ಲಿ ಅಗ್ನಿ ಸ್ಥಾಪಿಸಿ, ಧ್ಯಾನ ಮಾಡತೊಡಗಿದ. ಅನೇಕ ದಿನಗಳ ನಂತರ ಅವನ ಭಕ್ತಿಗೆ ಮೆಚ್ಚಿ, ಸುಪ್ರೀತನಾದ ಭಗವಂತನು ಬಾವಿಯಲ್ಲಿಯೇ ದರ್ಶನ ಕೊಟ್ಟು, 'ಬೇಕಾದ ವರವನ್ನು ಕೇಳಿಕೋ' ಎಂದ. ತ್ರಿತನು, 'ಈ ಬಾವಿಯು ಸದಾ ನೀರಿನಿಂದ ತುಂಬಿರಬೇಕು, ಜನಗಳಿಗೆ ಉಪಯುಕ್ತವಾಗಬೇಕು' ಎಂದು ಕೇಳಿಕೊಂಡ. ಕೆಲವೇ ನಿಮಿಷಗಳಲ್ಲಿ ಬಾವಿಯು ನೀರಿನಿಂದ ತುಂಬಿ, ತ್ರಿತನು ಈಜಿಕೊಂಡು ಮೇಲೆ ಬಂದ. ಆದರೆ ನೀರು ಬರುವುದು ಮಾತ್ರ ನಿಲ್ಲಲಿಲ್ಲ. ಬಾವಿಯ ನೀರು ಕೊಳವಾಗಿ, ನದಿಯಾಗಿ ಹರಿದು ಎಲ್ಲರ ದಾಹ ತಣಿಸಿ, ವಿಶಾಲ ಭೂಮಿಯನ್ನು ನೀರಿನಿಂದ ನೆನೆಸಿ, ಸರ್ವರಿಗೂ ಉಪಕಾರ ಮಾಡಿತು.



ಏಕತ, ದ್ವಿತರು ಮನೆಯಲ್ಲಿ ಧ್ಯಾನ ಮಾಡಿದರೂ ಅವರ ಸ್ವಾರ್ಥದಿಂದ ಹಾಗೂ ತ್ರಿತನಿಗೆ ಸಹಾಯ ಮಾಡದೇ ಅವನ ಸ್ವತ್ತು ಅಪಹರಿಸಿದ್ದರಿಂದ ದೇವತೆಗಳು ಅವರಿಬ್ಬರನ್ನೂ ಹಂದಿಗಳನ್ನಾಗಿ ಮಾರ್ಪಡಿಸಿದರು. ಈಗಲೂ ಆ ನದಿ ಹರಿಯುತ್ತಲೇ ಇದೆ.

ಆ ನದಿಯ ಹೆಸರು ನಿಮಗೆ ತಿಳಿದಿದೆಯಾ ?

ಅದುವೆ ಸರಸ್ವತಿ ನದಿ. ತ್ರಿವೇಣಿ ಸಂಗಮ ಪ್ರಯಾಗರಾಜ್‌ನಲ್ಲಿದೆ. ಗಂಗಾ, ಯಮುನಾ ಹಾಗೂ ಸರಸ್ವತಿ, ಈ ಮೂರೂ ನದಿಗಳ ಸಂಗಮವನ್ನು ಇಲ್ಲಿ ಕಾಣಬಹುದು. ಈ ಸಂಗಮದಲ್ಲಿ ಸರಸ್ವತಿ ಗುಪ್ತಗಾಮಿನಿಯಾಗಿ ಹರಿಯುತ್ತಿದ್ದಾಳೆ. ❋ *('ಪೌರಾಣಿಕ ಕಥೆಗಳು' ಪುಸ್ತಕದಿಂದ)*